7. ಪ್ರಶ್ನಾ ಕಾಗದಗಳು ಕೆಮಾಯಿ ಯಾವ ಕಾಗದಗಳನ್ನಾಗಲಿ ಪರೀಕ್ಷೆ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. "ವಿಷ್ಪ್ ಕೆಟ್ಟುಹೋದ ಕಾಗದ ವಗ್ಗೆರೆಗಳು" ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು

ಎಲ್. ರೈಸ್,
ಎಜ್ಯುಕೇಷನ್ ಸೆಕ್ರಟರಿ.

ಪಬ್ಲಿಕ್ ವರ್ಕ್ಸ್ ಇಲಾಖೆ.

ಇನ್ಸ್ಟ್ರುಮೆಂಟ್‌ಗಳು.

ನಂ. 184—48. ತಾರೀಖು 11ನೇ ಜನವರಿ 1889.

ಸ್ಪೆಷಲ್ ಇಂಪ್ರೂವ್‌ಮೆಂಟ್ ಡಿವಿಜ್ ಸ್ಯಾನಿಟರಿ ಇಂಜನೀರ್ ಮೇ|| ಸ್ಟ್ರ್ಯಾಂಡಿಷ್‌ಲೀಯವರಿಗೆ 1889ನೇ ಇಸವಿ ಫಿಬ್ರವರಿ ಗುರ್ತೇ ಲಾಗಾಯತು ಯಾ ಅವರು ಹೊರಟು ಹೋಗುವ ತಾರೀಖು ಲಾಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೇ|| ಸ್ಟ್ರ್ಯಾಂಡಿಷ್‌ಲೀಯವರು ರಜಾದ ಮೇಲೆ ಇರುವ ಪರ್ಯಂತ, ಹಂಗಾಮಿ ತರೀಕ್ ಅಪ್ಪಗ್ರಾಂ ನಾಲಾ ಡಿವಿಜನಿನ ಎಗ್ಜಿಕ್ಯೂಟಿವ್ ಇಂಜನೀರು ತಮ್ಮ ಕೆಲಸಗಳೊಂದಿಗೆ ಸದರೀ ಡಿವಿಜನಿನ ಚಾರ್ಜನ್ನು ವಹಿಸಿರತಕ್ಕದ್ದು.

ನಂ. 275—58. ತಾರೀಖು 17ನೇ ಜನವರಿ 1889.

ಸ್ಪೆಷಿಯಲ್ ಇಂಪ್ರೂವ್‌ಮೆಂಟ್ ಡಿವಿಜ್ ಅಸ್ಸಿಟಲ್ ಇಂಜನೀರ್ ಮೇ|| ಟಿ. ವಿ. ನಾರಿಸ್, ಬಿ. ಕೆ. ಇ. ಯವರು, ಅವರಿಗೆ 1888ನೇ ಇಸವಿ ಅಕ್ಟೋಬರ್ 10ನೇ ನಮ್ಬರ್ಕಂ 5038—851ನೇ ನಂಬರಿನ ಇನ್ಸ್ಟ್ರುಮೆಂಟಿನಲ್ಲಿ ಕೊಟ್ಟಿದ್ದ ಪ್ರಿವಿಲೀಜ್ ರಜಾದಿಂದ ಪುನಶ್ಚ ಕೆಲಸದ ಮೇಲೆ ಬಂದಿರುತ್ತಾರಾಗಿ, 1889ನೇ ಇಸವಿ ಜನವರಿ 14ರ ಲಾಗಾಯತು ಫಿಬ್ರವರಿ 9ನೇ ತಾರೀಖು ವರಿಗೂ ಬಾಕೀಲಿರುವ ಉಪಯೋಗಿಸಿಕೊಳ್ಳದ ರಜಾವನ್ನು ಇದರ ದೆಸೆಯಿಂದ ರದ್ದುಪಡಿಸಿರುತ್ತೆ.

ನಂ. 290—61. ತಾರೀಖು 17ನೇ ಜನವರಿ 1889.

2ನೇ ಗ್ರೇಡ್ ಓವರ್‌ಸೀರ್ ಮೇ|| ಜೆ. ಪಿ. ಜೇಕಬ್ಸ್‌ಯವರಿಗೆ 1889ನೇ ಇಸವಿ ಜನವರಿ ಗುರ್ತೇ ಲಾಗಾಯತು 3ನೇ ಗ್ರೇಡ್ ಓವರ್‌ಸೀಯರ್ ಕೆಲಸಕ್ಕೆ ಕಂಫರಂ ದಾಖಲ್ಮಾಡಲ್ಪಟ್ಟಿರುತ್ತೆ.

ನಂ. 293—64. ತಾರೀಖು 17ನೇ ಜನವರಿ 1889.

2ನೇ ಗ್ರೇಡ್ ಓವರ್‌ಸೀರ್ ಕೆ. ಪ್ಯಾಷೇರಾಯರಿಗೆ, ಮಾಹೆ ಮಜಕೂರ್ ಗುರ್ತೇ ಲಾಗಾಯತು 1ನೇ ಗ್ರೇಡ್ ಸಬ್ ಓವರ್‌ಸೀರ್ ಕೆಲಸಕ್ಕೆ ಕಂಫರಂ ದಾಖಲ್ಮಾಡಲ್ಪಟ್ಟಿರುತ್ತೆ.

ಸಿ. ಹೆಚ್. ಎಂ. ಕೆಂಪಿಂಗ್‌ಟನ್, ಮೇಜರ್ ಆರ್. ಇ.
ಅಸಿಸ್ಟೆಂಟ್ ಸೆಕ್ರಟೀರಿ ಮೈ. ಪ. ಇ.

ಲೆಜಿಸ್ಲೇಟಿವ್ ಇಲಾಖೆ.

ತಾರೀಖು 19ನೇ ಡಿಸೆಂಬರ 1888.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿಂಬ 1888ನೇ ಇಸವಿ IVನೇ ನಂಬರ್ ರಗ್ಯುಲೇಷನಿನ ಇಂಗ್ಲಿಷ್ ಮತ್ತು ಕನ್ನಡ ಪ್ರತಿಗಳು ಪ್ರತಿ 1ಕ್ಕೆ ಎಂದು ರೂಪಾಯಿ ಪ್ರಕಾರ ಬೆಂಗಳೂರಲ್ಲಿರತಕ್ಕ ಗವರ್ನಮೆಂಟ್ ಬುಕ್ಕು ಡಿಪೋದಲ್ಲಿ ಖರೀದಿಗೆ ದೊರೆಯುವವು.

ಯಸ್. ವೆಂಕಟವರದಯ್ಯಂಗಾರ್,
ಲೆಜಿಸ್ಲೇಟಿವ್ ಸೆಕ್ರಟರಿ.